ದಿನಾಂಕಃ 27.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜದಾರರ ಪರ ಶ್ರೀ. ಎಸ್.ಡಿ.ಜೆ. ವಕೀಲರಿಂದಃ**

12. ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

| Sl.No. | Descriptions | Marked as |
|---|---|---|
| 1 | R/R of R.S.No.100 of K.D. Shirahatti village | Ex.P1 |
| 2 | Power supply certificate in respect of R.S.No.100 | Ex.P2 |
| 3 | Cane weight slip | Ex.P3 |
| 4 | C.C. of Agreement of sale deed dated 15.04.2017 | Ex.P4 |
| 5 | C.C. of Sale deed dated 04.01.2016 in respect of R.S.No.19/19 | Ex.P5 |
| 6 | C.C. of Agreement of sale deed dated 26.10.2016 in respect of R.S.No.161 | Ex.P6 |
| 7 | C.C. of Sale deed dated 04.06.2018 in respect of R.S.No.190 | Ex.P7 |
| 8 | C.C. of Agreement of sale deed dated 03.08.2015 in respect of R.S.No.190/2 | Ex.P8 |
| 9 | C.C. of Sale deed dated 17.02.2023 in respect of R.S.No.190/30 | Ex.P9 |
| 10 | C.C. of Decree in O.S.139/18 | E.x.P10 |
| 11 | C.C. of petition in EP 52/2022 | Ex.P11 |
| 12 | C.C. of order sheet in EP 52/2022 | Ex.P12 |
| 13 | C.C. of Judgment and award in LAC 791/2022 | Ex.P13 |
| 14 | C.C. of Judgment and award in LAC 426/2022 | Ex.P14 |
| 15 | True copy of village map in Shirahatti K.D. | Ex.P15 |
| 16 | True copy of village map in Shirahatti B.K | Ex.P16 |

| | | |
|---|---|---|
| 17 | Certificate issued by village accountant ragarding irrigation | Ex.P17 |

ನಾನು ನನ್ನ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 1ನೇ ಎದುರುದಾರ ಪರ ಮಾನ್ಯ ಡಿ.ಜಿ.ಪಿ. ವಕೀಲರಿಂದಃ**

13. ನನ್ನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ಶಿರಹಟ್ಟಿ ಕೆ.ಡಿ ಇದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದೆ ಎಂದರೆ ನಿಜ. ಶಿರಹಟ್ಟಿ ಕೆ.ಡಿ. ಮತ್ತು ಶಿರಹಟ್ಟಿ ಬಿ.ಕೆ. ಪ್ರತ್ಯೇಕ ಗ್ರಾಮಗಳು ಎಂದರೆ ನಿಜ, ಸಾಕ್ಷಿಯು ಎರಡೂ ಗ್ರಾಮಗಳು ಅಕ್ಕಪಕ್ಕ ಇದೆ ಎನ್ನುತ್ತಾರೆ. ಶಿರಹಟ್ಟಿ ಕೆ.ಡಿ ಯಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಜಮೀನುಗಳು ಇವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಹೆಚ್ಚಿನ ಜಮೀನು ನೀರಾವರಿ ಜಮೀನು ಇದ್ದು, ಸ್ವಲ್ಪ ಬೇರೆ ಜಮೀನು ಇದೆ ಎನ್ನುತ್ತಾರೆ. ಸಾಮಾನ್ಯವಾಗಿ ಒಂದು ಊರಿನ ಜಮೀನುಗಳು ಇನ್ನೊಂದು ಊರಿಗೆ ಹೋಲಿಸಿದರೆ ಒಂದೇ ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಸಾರಾಪುರಕ್ಕೆ 2 ಕಿ.ಮೀ ದೂರ ಇದೆ. ಸಾರಾಪುರ ಇದು ಶಿರಹಟ್ಟಿ ಕೆ.ಡಿ ಗಿಂತ ದೊಡ್ಡ ಊರು ಎಂದರೆ ಸರಿಯಲ್ಲ. ಎರಡೂ ಒಂದೇ ರೀತಿ ಇದೆ ಎನ್ನುತ್ತಾರೆ. ಸಾರಾಪುರದಿಂದ ನಮ್ಮ ಊರಿಗೆ 2 ಕಿ.ಮಿ ಅಂತರ ಎಂದು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸಾಮಾನ್ಯವಾಗಿ ಹತ್ತಿಕೊಂಡ ಜಮೀನಿಗೆ ಮತ್ತು ನೀರಾವರಿ ಜಮೀನಿಗೆ ಕಿಮ್ಮತ್ತು ಜಾಸ್ತಿ ಇರುತ್ತದೆ ಎಂದರೆ ನಿಜ. ಭೂಸ್ವಾಧೀನಪಡಿಸಿಕೊಂಡ ಜಮೀನು ನನ್ನನ್ನು ಹೊರತುಪಡಿಸಿ ಉಳಿದ 3 ಜನರ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ತಂದೆ ಕಲ್ಲಪ್ಪ ರತ್ನಪ್ಪ ಕಡಹಟ್ಟಿ ರವರು 2015 ರಲ್ಲಿ ಮರಣ

ಹೊಂದಿರುತ್ತಾರೆ. ನಮ್ಮ ತಂದೆಯ ವಾರಸಾ ಪ್ರಮಾಣ ಪತ್ರ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಅವಾರ್ಡ ನನ್ನ ತಂದೆ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳ ಮುಂದೆ ನನ್ನ ತಂದೆ ಮೃತಪಟ್ಟ ಬಗ್ಗೆ ವಾರಸಾ ಪ್ರಮಾಣ ಪತ್ರ ಹಾಜರುಪಡಿಸಿ ಅವಾರ್ಡನ್ನು ನಮ್ಮ ಹೆಸರಿನಲ್ಲಿ ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನಲ್ಲದೇ ಸದರಿ ಜಮೀನಿಗೆ ನನ್ನ ದೊಡ್ಡಪ್ಪ ಹಾಗೂ ಸೋದರರ ಪಾಲು ಸಹ ಇದೆ ಎಂದರೆ ಸರಿ.

14. ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಸರ್ವೆ ನಂ.100. ನಮ್ಮ ಜಮೀನಿನ ಆರ್.ಟಿ.ಸಿ ನಾನು ನೋಡಿರುತ್ತೇನೆ. ನಿಪಿ–1 ಆರ್.ಟಿ.ಸಿ ಯಲ್ಲಿ ನಮ್ಮ ಜಮೀನಿನ ಸಂಪೂರ್ಣ ಮಾಹಿತಿ ಇದೆ ಎಂದರೆ ನಿಜ. ನಿಪಿ–1 ರಲ್ಲಿ ಇರುವ ಅಂಶಗಳು ನಿಜ ಇದೆಯಾ ಅಥವಾ ಸುಳ್ಳು ಇದೆಯಾ ಎಂದರೆ ಸಾಕ್ಷಿಯು ಅದರಲ್ಲಿ ಬಾವಿ ನಮೂದು ಮಾಡಿಲ್ಲ ಉಳಿದಂತೆ ಸರಿ ಇದೆ ಎನ್ನುತ್ತಾರೆ. ನಿಪಿ–1 ಪಹಣಿ ಪತ್ರಿಕೆಯಲ್ಲಿ ಬಾವಿಯನ್ನು ನಮೂದು ಮಾಡುವಂತೆ ತಹಶೀಲ್ದಾರರಿಗೆ ಅರ್ಜಿ ಕೊಡಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಬಾವಿಯಾಗಲೀ ಕೊಳವೆ ಬಾವಿಯಾಗಲೀ ಇಲ್ಲದೇ ಇದ್ದುದ್ದರಿಂದ ನಮ್ಮ ಜಮೀನು ನೀರಾವರಿ ಜಮೀನು ಆಗದೇ ಇದ್ದುದ್ದರಿಂದ ಪಹಣಿ ಪತ್ರಿಕೆಯಲ್ಲಿ ಬಾವಿಯನ್ನಾಗಲೀ ಕೊಳವೆ ಬಾವಿಯನ್ನಾಗಲೀ ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ–2 ನ್ನು ದಿ 16.12.2023 ರಂದು ಪಡೆದುಕೂಳ್ಳಲಾಯಿತು ಎಂದರೆ ನಿಜ. ನಿಪಿ–2 ನ್ನು ಈ ಕೇಸಿನಲ್ಲಿ ಹೆಚ್ಚಿನ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–2 ಇದು ಸರ್ವೆ ನಂ.106 ಕ್ಕೆ ಸಂಬಂಧಿಸಿದೆ ಎಂದರೆ ಸರಿ.

15. ನನ್ನ ಬ್ಯಾಂಕ ಖಾತೆ ಇದೆ ಎಂದರೆ ನಿಜ. ನಮ್ಮ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸುತ್ತಿದ್ದೇವು. ಕಬ್ಬು ಕಳಿಸಿದ ಬಗ್ಗೆ ಕಾರ್ಖಾನೆಯವರು ಕಬ್ಬಿನ ತೂಕದ ಪಾವತಿ ಕೊಡುತ್ತಾರೆ ಎಂದರೆ ನಿಜ. ಸಕ್ಕರೆ ಕಾರ್ಖಾನೆಯವರು ಕಬ್ಬಿನ ಬಿಲ್ಲನ್ನು ನಮ್ಮ ಬ್ಯಾಂಕ ಖಾತೆಗೆ ಹಾಕುತ್ತಾರೆ ಎಂದರೆ ನಿಜ. ನಾವು ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸಿದ ಬಗ್ಗೆ ಕಬ್ಬಿನ ತೂಕದ ಪಾವತಿ ಮತ್ತು ಬ್ಯಾಂಕ ಖಾತೆಯ ಪುಸ್ತಕದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ನನಗೆ ನನ್ನ ಭೂಸ್ವಾಧೀನಪಡಿಸಿಕೊಂಡ ಜಮೀನು ಹೊರತುಪಡಿಸಿ ಬೇರೆ ಜಮೀನುಗಳು ಇವೆ. ಸದರಿ ಜಮೀನುಗಳು ನೀರಾವರಿ ಜಮೀನು ಎಂದರೆ ನಿಜ. ಅಲ್ಲೂ ಸಹ ನಾವು ಕಬ್ಬು ಬೆಳೆಯುತ್ತೇವೆ. ನಿಪಿ–3 ರಲ್ಲಿ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಸರ್ವೆ ನಂಬರ ಇಲ್ಲ ಎಂದರೆ ಸರಿಯಲ್ಲ. ನಿಪಿ–3 ಇದನ್ನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸಕ್ಕರೆ ಕಾರ್ಖಾನೆಯವರ ಜೊತೆ ಶಾಮೀಲಾಗಿ ಪಡೆದು ತಂದು ಖೊಟ್ಟಿ ದಾಖಲೆ ಎಂದರೆ ಸರಿಯಲ್ಲ.

16. ಸಾಮಾನ್ಯವಾಗಿ ಹಳ್ಳಿಯಲ್ಲಿ ರೈತರಿಗೆ ಸಾಲ ಕೊಡುವಾಗ ರೈತರ ಜಮೀನನ್ನು ಅಡವು ಇಟ್ಟು ಸಾಲ ಕೊಡುತ್ತಾರೆ ಎಂದರೆ ನಿಜ. ನಿಪಿ–4 ಇದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬದ್ರತೆಗಾಗಿ ಮಾಡಿಕೊಟ್ಟ ಪತ್ರ ಎಂದರೆ ಸರಿಯಲ್ಲ. ನಿಪಿ–6 ನ್ನೂ ಸಹ ಸಾಲದ ಭದ್ರತೆಗಾಗಿ ಮಾಡಿಕೊಟ್ಟ ದಾಖಲೆ ಎಂದರೆ ಸರಿಯಲ್ಲ. ನಿಪಿ–4 ಮತ್ತು 6 ರ ಖರೀದಿ ಕರಾರು ಪತ್ರದ ಆಧಾರದ ಮೇಲೆ ಖರೀದಿ ಪತ್ರ ಆಗಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ನಾನು ಉಪನೊಂದಣಾಧಿಕಾರಿ ಕಚೇರಿಗೆ ಹೋಗಿ ವಿಚಾರಣೆ ಮಾಡಿಲ್ಲ. ಸಾಮಾನ್ಯವಾಗಿ ತುಂಡು ಜಮೀನು ಅಂದರೆ 2 ರಿಂದ 10 ಗುಂಟೆ ಜಮೀನನ್ನು ಮನೆ

ಕಟ್ಟಲು ಎಂದು ಖರೀದಿ ಮಾಡುತ್ತಾರೆ ಎಂದರೆ ಸರಿಯಲ್ಲ. ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳ ಸರ್ವೆ ನಂಬರ ನನಗೆ ಹೇಳಲಾಗುವುದಿಲ್ಲ. ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳೆಲ್ಲವೂ ಊರಿಗೆ ಹತ್ತಿಕೊಂಡು ಇರುವ ನೀರಾವರಿ ಜಮೀನುಗಳು ಎಂದರೆ ಸರಿಯಲ್ಲ. ನಿಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು ಮತ್ತು ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನು ಒಂದೇ ರೀತಿಯದ್ದು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಬೇರೆ ದಾಖಲೆ ಹಾಜರು ಮಾಡಿಲ್ಲ ಎನ್ನುತ್ತಾರೆ. ನಿಪಿ–8 ನ್ಯಾಯಾಲಯದ ಆದೇಶದಂತೆ ಆದ ಖರೀದಿ ಪತ್ರಕ್ಕೂ ನಮ್ಮ ಜಮೀನಿಗೂ ಸಂಬಂಧ ಇಲ್ಲ ಎಂದರೆ ಸರಿ. ಸಾಕ್ಷಿಯು ಆ ಜಮೀನು ಮತ್ತು ನಮ್ಮ ಜಮೀನು ಒಂದೇ ರೀತಿಯ ಜಮೀನು ಎನ್ನುತ್ತಾರೆ. ಈ ಎರಡೂ ಜಮೀನುಗಳು ಒಂದೇ ರೀತಿಯದ್ದು ಎಂದು ತೋರಿಸಲು ದಾಖಲೆ ಕೊಟ್ಟಿಲ್ಲಎಂದರೆ ನಿಜ. ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳಿಗೂ ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಹೆಚ್ಚಿನ ಹಣ ಪಡೆಯಬೇಕೆಂಬ ಉದ್ದೇಶದಿಂದ ಆ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.  ನಿಪಿ–17 ನ್ನು ದಿನಾಂಕ 22.12.2023 ರಂದು ಪಡೆದುಕೊಂಡ ದಾಖಲೆ ಎಂದರೆ ಸರಿ. ನಿಪಿ–17 ರಲ್ಲಿ ಭೂಸ್ವಾಧಿನಪಡಿಸಿಕೊಂಡ ಕಾಲಕ್ಕೆ ನೀರಾವರಿ ಇತ್ತು ಎಂದು ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿ. ನಿಪಿ–2 ಮತ್ತು 17 ಇದು ನಮ್ಮ ಜಮೀನಿಗೆ ಸಂಬಂಧ ಇದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳಾಗಿ ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–17 ನ್ನು ನಮ್ಮ ಕೇಸಿಗೆ ಅನುಕೂಲ ಆಗಲೀ ಅಂತಾ ಖೊಟ್ಟಿ ದಾಖಲೆ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ

ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಕಾಲಕ್ಕೆ ನೀರಾವರಿ ಜಮೀನು ಇತ್ತು ಅಂತಾ ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

17 ನಮ್ಮ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ದಿ 22.02.2018 ರಂದು ಅಧಿಸೂಚನೆ ಆಯಿತು ಎಂದರೆ ನಿಜ. ಅಧಿಸೂಚನೆ ಆದ ನಂತರ ಭೂಸ್ವಾಧೀನಾಧಿಕಾರಿಗಳು ನಮಗೆ ನೊಟೀಸ ನೀಡಿದ್ದರು ಎಂದರೆ ಸರಿಯಲ್ಲ.ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಬಂದು ಜಂಟಿ ಸರ್ವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನನ್ನು ಪರಿಶೀಲನೆ ಮಾಡಿ ಅದರಲ್ಲಿ ಬೆಳೆದ ಬೆಳೆ, ನೀರಾವರಿ ಮೂಲ, ಮಣ್ಣಿನ ತರಹ ಇವುಗಳನ್ನು ಪರಿಶೀಲನೆ ಮಾಡಿ ಪರಿಹಾರದ ಹಣ ನಿಗದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವಾರ್ಡಿನ ಕೋಷ್ಠಕ 2 ರಲ್ಲಿ ಕಾಣಿಸಿದ ಜಮೀನುಗಳು ನಮ್ಮ ಜಮೀನಿನ ಹತ್ತಿರದ ಜಮೀನುಗಳು ಎಂದರೆ ನಿಜ. ಕೋಷ್ಠಕ 2 ರಲ್ಲಿ ನಮೂದಿಸಿದ ಜಮೀನುಗಳ ಖರೀದಿ ವ್ಯವಹಾರ 2015 ರಿಂದ 2018ವರೆಗೆ ಆಗಿದೆ ಎಂದರೆ ನಿಜ. ಭೂಸ್ವಾಧೀನಾಧಿಕಾರಿಗಳು ನಮ್ಮ ಅಕ್ಕಪಕ್ಕದ ಮಾರಾಟವಾದ ಜಮೀನುಗಳ ಅಂಕಿ ಅಂಶಗಳ ಆಧಾರದ ಮೇಲೆ ಯೋಗ್ಯ ಪರಿಹಾರದ ಹಣ ನಿಗದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಕೊಟ್ಟ ಪರಿಹಾರದ ಹಣ ಪಡೆದಿದ್ದೇವೆ ಎಂದರೆ ನಿಜ.ನಮ್ಮ ಭೂಸ್ವಾಧೀನಪಡಿಸಿಕೊಂಡ ಕಾಲಕ್ಕೆ ಇದ್ದ ಜಮೀನಿನ ಬೆಲೆಗಿಂತಲೂ ಭೂಸ್ವಾಧೀನಾಧಿಕಾರಿಗಳು ಹೆಚ್ಚಿನ ಬೆಲೆ ನಿಗದಿ ಮಾಡಿದ್ದರೂ ಸಹ ಇನ್ನೂ ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀಮತಿ. ಎಮ್.ಪಿ. ರವರಿಂದ**

18. ನಮ್ಮ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ದಿ 22.02.2018 ರಂದು ನೊಟಿಫಿಕೇಷನ್ ಮಾಡಿದರು ಎಂದರೆ ನಿಜ. ಈ ರೀತಿ ಭೂಸ್ವಾಧೀನಪಡಿಸಿಕೊಳ್ಳಲು ನೊಟಿಫಿಕೇಷನ್ ಆದ ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಜಮೀನುಗಳಿಗೆ ಬಂದು ಜಂಟಿ ಮೋಜನಿ ಮಾಡಿದರು ಎಂದರೆ ಸಾಕ್ಷಿಯು ಮೋಜನಿ ಮಾಡಿದರು ಆದರೆ ಆಗ ನಾನು ಅಲ್ಲಿ ಇರಲಿಲ್ಲ ಎನ್ನುತ್ತಾರೆ. ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಜಂಟಿ ಮೋಜನಿ ಮಾಡಿ ವಸ್ತು ಸ್ಥಿತಿ ಪರಿಶೀಲಿಸಿದಾಗ ಅವರಿಗೆ ಅಲ್ಲಿ ಇದ್ದ ಜಮೀನು ನೀರಾವರಿ ಜಮೀನೋ ಅಥವಾ ಒಣ ಬೇಸಾಯದ ಜಮೀನು ಎಂದು ಗೊತ್ತಾಯಿತು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಮ್ಮ ಜಮೀನು ನೀರಾವರಿ ಜಮೀನು ಎನ್ನುತ್ತಾರೆ. ನಮ್ಮ ಜಮೀನು ನೀರಾವರಿ ಎಂದು ತೋರಿಸಲು ದಾಖಲೆಗಳನ್ನು ಭೂಸ್ವಾಧೀನಾಧಿಕಾರಿಗಳ ಮುಂದೆ ಹಾಜರುಪಡಿಸಲು ನಮಗೆ ತೊಂದರೆ ಇರಲಿಲ್ಲ ಎಂದರೆ ನಿಜ. ನಾವು ನೀರಾವರಿ ಬಗ್ಗೆ ಯಾವುದೇ ದಾಖಲೆಗಳನ್ನು ಭೂಸ್ವಾಧೀನಾಧಿಕಾರಿಗಳ ಮುಂದೆ ಹಾಜರು ಮಾಡದೇ ಇದ್ದ ಕಾರಣ ನಿಮ್ಮ ಜಮೀನನ್ನು ಒಣ ಬೇಸಾಯದ ಜಮೀನು ಎಂದು ಪರಿಗಣಿಸಲಾಯಿತು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ನಮ್ಮ ಜಮೀನು ನೀರಾವರಿ ಜಮೀನು ಆಗಿತ್ತು, ಆದರೆ ಭೂಸ್ವಾಧೀನಾಧಿಕಾರಿಗಳು ಒಣ ಬೇಸಾಯ ಎಂದು ತಪ್ಪಾಗಿ ನಮೂದಿಸಿದ್ದಾರೆ ಎನ್ನುತ್ತಾರೆ.

19. ದಿ 01.09.2020 ರಂದು ಭೂಸ್ವಾಧೀನಾಧಿಕಾರಿಗಳು ಅವಾರ್ಡ ಮಾಡಿದ್ದಾರೆ ಎಂದರೆ ನಿಜ. ಭೂಸ್ವಾಧೀನಾಧಿಕಾರಿಗಳು ಅವಾರ್ಡ ಮಾಡಿದ ನಂತರ ಅವರು ನಮಗೆ ದಿ 21.05.2021 ರಂದು ನೊಟೀಸ ನೀಡಿದ್ದರು ಎಂದರೆ ಸರಿಯಲ್ಲ. ನಾವು ರೆಫರೆನ್ಸ ಅರ್ಜಿಯನ್ನು ದಿ 21.06.2021 ರಂದು ಸಲ್ಲಿಸಿದ್ದೇವೆ ಎಂದರೆ ನಿಜ. ನೀವು ರೆಫರೆನ್ಸ ಅರ್ಜಿ ಸಲ್ಲಿಸಿದ ನಂತರ ಅದನ್ನು ನಿಗದಿತ ಅವಧಿಯೊಳಗೆ ಭೂಸ್ವಾಧೀನಾಧಿಕಾರಿಗಳು ನ್ಯಾಯಾಲಯಕ್ಕೆ ಕಳಿಸಿದ್ದಾರಾ ಇಲ್ಲವೋ ಎಂದು ನೀವು ಕೇಳಿದ್ದೀರಿ ಎಂದರೆ ಸಾಕ್ಷಿಯು ನಾವು ಅವರನ್ನು ಕೇಳಿಲ್ಲ ಎನ್ನುತ್ತಾರೆ. ಭೂಸ್ವಾಧೀನಾಧಿಕಾರಿಗಳು ರೆಫರೆನ್ಸ ಅರ್ಜಿಯನ್ನು ಕಳಿಸುವಲ್ಲಿ ವಿಳಂಬ ಮಾಡುತ್ತಿದ್ದರು ಎಂದು ಅವರಿಗೆ ರೆಫರೆನ್ಸ ಅರ್ಜಿ ನ್ಯಾಯಾಲಯಕ್ಕೆ ಕಳಿಸುವಂತೆ ನಿರ್ದೇಶನ ಕೊಡುವಂತೆ ನ್ಯಾಯಾಲಯಕ್ಕೆ ಅರ್ಜಿ ಹಾಕಲು ನ್ಯಾಯಾಲಯಕ್ಕೆ ತೊಂದರೆ ಇರಲಿಲ್ಲ ಎಂದರೆ ನಿಜ.

20. ಶಿರಹಟ್ಟಿ ಕೆ.ಡಿ ಊರಿನಲ್ಲಿ ಜಮೀನುಗಳು ಮಾರಾಟ ಆಗಿದೆ ಎಂದರೆ ನಿಜ. ಅವಾರ್ಡಿನ ಕೋಷ್ಠಕ 2 ರಲ್ಲಿ ನಮೂದಿಸಿದ ಜಮೀನುಗಳು ಮತ್ತು ಇತರ 2 ಜಮೀನುಗಳು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಹತ್ತಿರದ ಜಮೀನುಗಳು ಎಂದರೆ ನಿಜ. ಅವಾರ್ಡಿನ ಕೋಷ್ಠಕ 2 ರಲ್ಲಿ ನಮೂದಿಸಿದ ಜಮೀನುಗಳು 2015 ರಿಂದ 2018 ನೇ ಇಸವಿಯಲ್ಲಿ ಮಾರಾಟವಾದಂತಹ ಜಮೀನುಗಳು ಎಂದರೆ ನಿಜ. ಅವಾರ್ಡಿನ ಕೋಷ್ಠಕ 2 ರಲ್ಲಿ ನಮೂದಿಸಿದ ಜಮೀನು ಮತ್ತು ಭೂಸ್ವಾಧೀನಪಡಿಸಿಕೊಂಡ ಜಮೀನುಗಳು ಒಂದೇ ತರಹದ ಜಮೀನುಗಳು ಎಂದರೆ ನಿಜ. ಅವಾರ್ಡಿನ ಕೋಷ್ಠಕ 2 ರಲ್ಲಿ ನಮೂದಿಸಿದ ಮಾರಾಟದ ಅಂಕಿ ಅಂಶಗಳ ಆಧಾರದ ಮೇಲೆ ನಮ್ಮ ಜಮೀನಿಗೂ ಯೋಗ್ಯ ಬೆಲೆ ನಿಗದಿ

ಮಾಡಲಾಗಿದೆ ಎಂದರೆ ಸರಿಯಲ್ಲ.

21. ನಿಪಿ–1 ಆರ್.ಟಿ.ಸಿ ಯಲ್ಲಿ ನೀರಾವರಿ ಬೆಳೆ ಮತ್ತು ನೀರಾವರಿ ಸೌಲಭ್ಯದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ–2 ಮತ್ತು ನಿಪಿ–3 ಮತ್ತು 17 ಹೆಸ್ಕಾಂ ಸರ್ಟಿಫಿಕೇಟ ಮತ್ತು ಕಬ್ಬಿನ ತೂಕದ ಬಿಲ್ಲುಗಳು ಎಲ್ಲವೂ ನಾವು ಹೆಚ್ಚಿನ ಪರಿಹಾರದ ಹಣ ಪಡೆಯಲು ಸೃಷ್ಟಿಸಿ ತಂದು ಹಾಜರು ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ಯಾವುದೇ ಜಮೀನುಗಳು ಊರಿಗೆ ತಾಗಿಕೊಂಡು ಇದ್ದರೆ ಅಂತಹ ಜಮೀನುಗಳಿಗೆ ಬೇಡಿಕೆ ಜಾಸ್ತಿ ಇರುತ್ತದೆ ಮತ್ತು ಅಂತಹ ಜಮೀನುಗಳ ಬೆಲೆಯೂ ಜಾಸ್ತಿ ಇರುತ್ತದೆ ಎಂದರ ನಿಜ. ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳು ಊರಿಗೆ ಹೊಂದಿಕೊಂಡು ಇವೆ ಎಂದರೆ ಸರಿ. ನಿಪಿ–4 ರಿಂದ 9 ಇವುಗಳು ಊರಿಗೆ ಹೊಂದಿಕೊಂಡು ಇರುವುದರಿಂದ ಅವುಗಳ ಕಿಮ್ಮತ್ತು ಜಾಸ್ತಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಅವುಗಳೂ ಸಹ ಬೆಳೆ ಬೆಳೆಯುವ ಜಮೀನುಗಳು ಎನ್ನುತ್ತಾರೆ. ನಿಪಿ–10 ರಿಂದ 12 ರಲ್ಲಿ ಕಾಣಿಸಿದ ಜಮೀನುಗಳು ಭೂಸ್ವಾಧೀನಪಡಿಸಿಕೊಂಡ ಜಮೀನುಗಳು ಅಲ್ಲ ಎಂದರೆ ನಿಜ. ಒಂದು ಊರಿನಿಂದ ಇನ್ನೊಂದು ಊರಿಗೆ ಜಮೀನಿನ ಗುಣಧರ್ಮ, ಬೆಳೆಯುವ ಬೆಳೆ ಬೇರೆ ಬೇರೆ ಇರುತ್ತವೆ ಎಂದರೆ ನಿಜ. ಸಾರಾಪುರ ಮತ್ತು ಶಿರಹಟ್ಟಿ ಕೆ.ಡಿ ಊರಿನಲ್ಲಿ ಇದ್ದ ಜಮೀನುಗಳು ಬೇರೆ ಬೇರೆ ರೀತಿಯದ್ದು ಎಂದರೆ ಸರಿಯಲ್ಲ. ನಿಪಿ–13 ತೀರ್ಪು ಇದು ಸಾರಾಪುರದ ಜಮೀನಿಗೆ ಸಂಬಂಧಪಟ್ಟಿದ್ದು ಎಂದರೆ ನಿಜ. ಈ ತೀರ್ಪನ್ನು ಪ್ರಶ್ನಿಸಿ ನೀರಾವರಿ ನಿಗಮದವರು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–15 ಮತ್ತು 16 ರ ನಕಾಶೆಗಳಲ್ಲಿ ಶಿರಹಟ್ಟಿ ಕೆ.ಡಿ ಮತ್ತು ಶಿರಹಟ್ಟಿ ಬಿ.ಕೆ ಗೆ ಸಾರಾಪುರ ತಾಗಿಕೊಂಡು ಇದೆ ಎಂದು ಕಾಣಿಸುವುದಿಲ್ಲ ಎಂದರೆ ನಿಜ. ನಿಪಿ–15 ಮತ್ತು 16 ನಕಾಶೆಗಳಲ್ಲಿ ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳು ಮತ್ತು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನುಗಳು ಹತ್ತಿರದಲ್ಲಿ ಇದೆ ಎಂದು ಕಾಣಿಸುವುದಿಲ್ಲ ಎಂದರೆ ನಿಜ. ನಿಪಿ–4 ರಿಂದ 9 ರಲ್ಲಿ ಕಾಣಿಸಿದ ಜಮೀನುಗಳು ನಿಪಿ–14 ನಕಾಶೆಯಲ್ಲಿ ಊರಿಗೆ ಹೊಂದಿಕೊಂಡಂತೆ ಕಾಣುತ್ತದೆ ಎಂದರೆ

ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಸರಿಯಾದ ಬೆಲೆ ನಿಗದಿ ಮಾಡಿದ್ದರೂ ಸಹ ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ತಂದು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ನ್ಯಾಯಾಧೀಶರು ಮತ್ತು ಭೂಸ್ವಾಧೀನ,
ಪುನರ್ವಸತಿ ಮತ್ತು ಪುನರ್ವಸತಿ ಪ್ರಾಧಿಕಾರ, ಬೆಳಗಾವಿ